6. ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕಾಲ, ವಿಷಯ ಕ್ರಮಾನುಸಾರವಾಗಿ ಪರೀಕ್ಷೆಯು ನಡೆಯುವುದು :—

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೆಯ ದಿನ...	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೆಯ ದಿನ ...	10—1	ಕನ್ನಡ ಗ್ರಂಥಗಳು ಮೊದಲನೆಯ ಪತ್ರಿಕೆ	100	400
	2—5	ಅದೇ ಎರಡನೆಯ ಪತ್ರಿಕೆ	100	
ಮೂರನೆಯ ದಿನ...	10—1	ಅದೇ ಮೂರನೆಯ ಪತ್ರಿಕೆ	100	
	2—5	ಅದೇ ನಾಲ್ಕನೆಯ ಪತ್ರಿಕೆ	100	
ನಾಲ್ಕನೆಯ ದಿನ ...	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರಕರಣ	100	
ಐದನೆಯ ದಿನ ...	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೆಯ ದಿನ ...	10—1	ಸಂಸ್ಕೃತ ಗ್ರಂಥಗಳು ಮೊದಲನೆಯ ಪತ್ರಿಕೆ	100	200
	2—5	ಅದೇ ಎರಡನೆಯ ಪತ್ರಿಕೆ.	100	

7. ಪರೀಕ್ಷಾ ವಿಷಯಗಳ ಒಂದೊಂದು ಸಮುದಾಯದಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವರು.

ಪರೀಕ್ಷಾ ವಿಷಯಗಳು ಕೆಳಗೆ ಕಾಣಿಸಿರುವಂತೆ 6 ಸಮುದಾಯಗಳಾಗಿ ಮಾಡಲ್ಪಟ್ಟಿವೆ :—

(1) I *a* ಮತ್ತು *b* | (3) I *d*. | (5) II *c*.
(2) I *c*. | (4) II *a* ಮತ್ತು *b* | (6) III.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೆಯ ವರ್ಗದಲ್ಲಿಯೂ, ಉಳಿದವರು ಎರಡನೆಯ ವರ್ಗದಲ್ಲಿಯೂ ಸೇರಿಸಲ್ಪಡುವರು.

8. ಕನ್ನಡ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ "ಅಪ್ಪರ್ ಸೆಕಂಡರಿ" ಅಂತಸ್ತಿನ ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಯೂ ಕೂಡ ಆಗಿದ್ದ ಪಕ್ಷದಲ್ಲಿ, ಕಾಲೇಜುಗಳಲ್ಲಿಯೂ ಹೈ ಸ್ಕೂಲುಗಳಲ್ಲಿಯೂ ಕನ್ನಡ ಮುನಸಿಗಳ ಕೆಲಸವನ್ನೂ, ತಾಲ್ಲೂಕು ಕನ್ನಡ ಸ್ಕೂಲ್‌ಗಳಲ್ಲಿ ಹೆಡ್ಮಾಸ್ತರುಗಳ ಕೆಲಸವನ್ನೂ ಕೊಡುವಾಗ ಇತರ ದರಖಾಸ್ತುದಾರರಿಗಿಂತ ಇವರಿಗೆ ಹೆಚ್ಚು ಪ್ರಾಮುಖ್ಯವು ಕೊಡಲ್ಪಡುವುದು.

9. ಈ ಪ್ರಕಟನೆಯು ಸ್ರ 1911ನೆಯ ಇಸವಿ ನವೆಂಬರು ಪರೀಕ್ಷೆಯಿಂದ ಆಚರಣೆಯಲ್ಲಿ ತರಲ್ಪಡುತ್ತದೆ.

ಹೆಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖೆ.

1908ನೆ ಇಸವಿ ಏಪ್ರೆಲ್ 24.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪಸಾರೆ ಜಿನಸುಗಳನ್ನು ಬಹಿರಂಗವಾದ ಹರಾಜು ಮೂಲಕ ನಿಕ್ರಯಿಸಲ್ಪಡುತ್ತೆ :—

ನಂಬ್ರು.	ಸ್ಥಳ.	ಹರಾಜು ತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪಸಾರೆ ಜಿನಸು ಮೊತ್ತ.	
				ಅವ್ವೆಲ್ ಅರಗು.	ಅಳಲೆಕಾಯಿ.
				ಮಣ. ಪ.	ಮಣ. ಪ.
1	ಶ್ರೀರಂಗಪಟ್ಟಣದ ಕೋಟೆ ...	13—3—1909	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	100 0	1,600 0

ಪರತ್ತು :—1887ನೆ ಇಸವಿ ಜೂನ್ 18ನೆ ಮಂಗಳವಾರ ಮೈಸೂರು ಗೆಜೆಟ್ಟಿನ 287—288ನೆ ಪುಟಗಳಲ್ಲಿ ಇರುವ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ್ 11ನೆ ಮಂಗಳವಾರ ನೋಟಿಫಿಕೇಷನನ್ನು ನೋಡಿ.

ಇಸ್ತಿಹಾರ್ನಾಮಾ, ತಾರೀಖು 12ನೆ ಫೆಬ್ರುವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉದ್ಯಾಡ್ರ್.	11—3—09	ಸಾಗ್ವಾನಿ ನಾಟಾ ...	800	25,000	ಕೆಚ್ಚು ಕಡಿಸು.
			ಡಿಟೋ ಜಂತಿಗಳು ...	400	5,000	
			ಹೊನ್ನೆ ನಾಟಾ ...	150	4,000	
			ಡಿಟೋ ಜಂತಿಗಳು ...	20	1,000	
			ಮತ್ತಿ ನಾಟಾ	200	5,000	
			ಡಿಟೋ ಜಂತಿಗಳು ...	75	500	
			ಬೀಟೆ ನಾಟಾ ...	25	1,000	
			ಕಾಡು ನಾಟಾ ...	25	500	
2	ನಂಜನಗೂಡು ಡಿಪೋ	12—3—09	ಸಾಗುವಾನಿ ನಾಟಾ ...	100	3,000	
			ಡಿಟೋ ಜಂತಿಗಳು ...	100	1,000	
			ಹೊನ್ನೆ ನಾಟಾ ...	100	2,000	
			ಡಿಟೋ ಜಂತಿಗಳು ...	100	500	
			ಮತ್ತಿ ನಾಟಾ ...	100	1,500	
			ಡಿಟೋ ಜಂತಿಗಳು	10	120	
			ಬೀಟೆ ನಾಟಾ	25	600	
			ಡಿಟೋ ಜಂತಿಗಳು ...	50	500	
			ಕಾಡು ನಾಟಾ ...	20	500	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಆದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ಕಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ಎಂ. ಜೆ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 30ನೆ ಜನವರಿ 1909, ಬೆಂಗಳೂರು.

ಚನ್ನಪಟ್ಟಣದಲ್ಲಿರುವ 2ನೆ ಕ್ಲಾಸ್ ಮುನಸಾಫರ್ ಬಂಗ್ಲೆಗೆ ರಿಪೇರಿ ಮಾಡಬೇಕಾಗಿರುವದ್ದರಿಂದ ಅದರಲ್ಲಿ 1909ನೆ ಇಸವಿ ಫೆಬ್ರುವರಿ 1ನೆ ತಾರೀಖು ಲಾಗಾಯಿತು ಮಾರ್ಚಿ ಆಖೈರ ವರಿಗೆ ಯಾರೊಬ್ಬ ಪ್ರಯಾಣೀಕರು ಇಳಿಯುವದಕ್ಕೆ ಅವಕಾಶ ವಿರುವದಿಲ್ಲಾ.

ಇಸ್ತಿಹಾರ್.

ಸರ್ಕಾರಕ್ಕೆ ಬರಬೇಕಾದ ಲೋನ್ ಬಾಕಿಗಾಗಿ ಬೆಂಗಳೂರು ತಾಲ್ಲೂಕು ಯಲಹಂಕದ ಹೋಬಳಿ ಜೋಡಿ ಗೊಲ್ಲಹಳ್ಳಿ ಗ್ರಾಮವು 1909ನೆ ಇಸವಿ ಮಾರ್ಚಿ 3ನೆ ತಾರೀಖು ದಿನ ಬಹಿರಂಗವಾಗಿ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಹೆಚ್ಚು ತಪಶೀಲಿಗೆ 1909ನೆ ಇಸವಿ ಫೆಬ್ರುವರಿ 4ನೆ ಶುಕ್ರುವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 64—65ನೆ ಪುಟದಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಎಸ್. ವೆಂಕಟರಂಗಂ,
ಫಾರ್ ಡೆಪ್ಯುಟಿ ಕಮಿಷನರ್.